permission of the KSIIDC or without the permission of the KSIIDC. I would like to know that.

ಶ್ರೀಮತಿ ನಾಗಮ್ಮ ಕೇಶವಮೂರ್ತಿ:– ಸನ್ಮಾನ್ಯ ಅಧ್ಯಕ್ಷರೆ, ಕೆ.ಎಸ್.ಐ.ಐ.ಡಿ.ಸಿ.ಯವರು ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಬಹಳ ಮುಖ್ಯವಾಗಿ ಪಾತ್ರವನ್ನು ವಹಿಸುತ್ತಾರೆ. ಇವರು ಮಧ್ಯಮ ಮತ್ತು ಭಾರಿ ಕೈಗಾರಿಕೆಗಳ ಸ್ಥಾಪನೆಗೆ ಹಣಕಾಸನ್ನು ಕೊಡುತ್ತಾರೆ. ಇದಲ್ಲದೆ they finance even to private entreprenuers and sole ownership concerns. The KSIIDC itself is a financial institution. So, there is no point in extending any term loan or equity to other financial institutions or it does not assist other financial institutions.

ರಾಜ್ಯದಲ್ಲಿ ನೇಕಾರರಿಗೆ ಮನೆಗಳ ಮಂಜೂರಾತಿ

343 (1736) ಶ್ರೀ ಬಸವರಾಜು (ಬ್ರಹ್ಮಾವರ):–

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಆಶ್ರಯ ಯೋಜನೆಯಡಿಯಲ್ಲಿ ಇದುವರೆಗೆ ರಾಜ್ಯದಲ್ಲಿ ನೇಕಾರ ವರ್ಗದವರಿಗೆ ಮಂಜೂರು ಮಾಡಿದ ವಸತಿಗಳು ಎಷ್ಟು ? (ಜಿಲ್ಲಾವಾರು ವಿವರಗಳನ್ನು ನೀಡುವುದು).

ಆ) ನೇಕಾರ ವರ್ಗದವರಿಂದ ಹೆಚ್ಚಿನ ಮನವಿಗಳು ಇದ್ದಲ್ಲಿ, ಯೋಜಿತ ವಸತಿ ಯೋಜನೆಯನ್ನು ವಿಸ್ತರಿಸಿ ಇನ್ನೂ ಹೆಚ್ಚಿನ ವಸತಿ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ಯೋಜಿಸಿದೆಯೇ;

ಇ) ನೇಕಾರ ವರ್ಗದವರಿಗಾಗಿ ಬೇರೆ ಯಾವುದಾದರೂ ಯೋಜನೆಯ ಮೂಲಕ ಹೆಚ್ಚಿನ ವಸತಿ ಸೌಲಭ್ಯವನ್ನು ಒದಗಿಸುವ ಯೋಜನೆಗಳು ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಗೋಪಿನಾಥ ಸಾಂಡ್ರಾ (ವಸತಿ ಸಚಿವರು):–

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಆಯ್ಕೆ ಮಾಡಿದ ಆಶ್ರಯ ಫಲಾನುಭವಿಗಳಲ್ಲಿ 38 ಜನ ನೇಕಾರರೂ ಇದ್ದಾರೆ. ಉಳಿದ ಜಿಲ್ಲೆಗಳಲ್ಲಿ ಗಣತಿ ಮಾಡಿರುವುದಿಲ್ಲ.

ಆ) ಇಲ್ಲ

ಇ) ಆಶ್ರಯ ಯೋಜನೆಯಡಿಯಲ್ಲಿ ಇಲ್ಲ. ಆದರೆ, ಜವಳಿ ಇಲಾಖೆಯವರು ಕರ್ನಾಟಕ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮುಖಾಂತರ 25,000 ಮನೆ ಮತ್ತು ಕಮ್ಮಟ (ವರ್ಕ್‌ಶೆಡ್ ಕಮ್ ಹೌಸಿಂಗ್)ಗಳ ನಿರ್ಮಾಣ ಮಾಡುವ ಬಗ್ಗೆ ಸಾಲದ ಹುಡ್ಕೋ ಸಂಸ್ಥೆಯೊಡನೆ ಪತ್ರ ವ್ಯವಹಾರ ನಡೆಸುತ್ತಿದ್ದಾರೆ.

ಶ್ರೀ ಜಿ.ಎಸ್. ಆಚಾರ್ (ಶ್ರೀ ಪಿ. ಬಸವರಾಜ್‌ರವರ ಪರವಾಗಿ):– ಸನ್ಮಾನ್ಯ ಅಧ್ಯಕ್ಷರೆ, ಆಶ್ರಯ ಯೋಜನೆಯಡಿಯಲ್ಲಿ ಇದುವರೆಗೆ ರಾಜ್ಯದಲ್ಲಿ ಎಷ್ಟು ಮನೆಗಳನ್ನು ನೇಕಾರರಿಗೆ ಮಂಜೂರು ಮಾಡಲಾಗಿದೆ ಎಂಬುದಕ್ಕೆ ಉತ್ತರದಲ್ಲಿ ಜಿಲ್ಲಾ ಮಾಹಿತಿಯನ್ನು ಗಣನೆ ಮಾಡಿಲ್ಲ, ಆದರೆ ದಕ್ಷಿಣ ಕನ್ನಡದಲ್ಲಿ ಮಾತ್ರ 38 ನೇಕಾರರಿಗೆ, ಫಲಾನುಭವಿಗಳಿಗೆ ಮನೆಗಳನ್ನು ಕೊಡಲಾಗಿದೆ ಎಂದು ಹೇಳಿದ್ದಾರೆ. ಆದರೆ ದಕ್ಷಿಣ ಕನ್ನಡವಾದರೂ ಏಕೆ ಗಣನೆಯಾಯಿತು ಎನ್ನುವುದು ನನಗೆ ಗೊತ್ತಾಗಲಿಲ್ಲ. ತಾವು ನೇಕಾರರಿಗೆ ಹೆಚ್ಚು ಮನೆಗಳನ್ನು ಕೊಡಬೇಕು ಮತ್ತು ಕರ್ನಾಟಕ ಹ್ಯಾಂಡ್‌ಲೂಮ್

ಡೆವಲಪ್‌ಮೆಂಟ್ ಕಾರ್ಪೊರೇಷನ್ ಮೂಲಕ ಎಷ್ಟು ಮನೆಗಳ ನಿರ್ಮಾಣ ಮಾಡುವ ಯೋಜನೆ ಇದೆ ಎನ್ನುವುದನ್ನು ತಿಳಿಸಿದರೆ ಅನುಕೂಲವಾಗುತ್ತಿತ್ತು.

ಶ್ರೀ ಕೆ.ಎನ್. ನಾಗೇಗೌಡ (ವಸತಿ ಸಚಿವರ ಪರವಾಗಿ):– ಸನ್ಮಾನ್ಯ ಅಧ್ಯಕ್ಷರೆ, ಆಶ್ರಯ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ 38 ನೇಕಾರರಿಗೆ ಮನೆಯನ್ನು ಕಟ್ಟಿಸಿ ಕೊಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಆಶ್ರಯ ಯೋಜನೆಯಲ್ಲಿ ನೇಕಾರರಿಗೆ ಮಾತ್ರ ಮನೆ ಕಟ್ಟಿಕೊಡುವ ಯೋಜನೆ ಇಲ್ಲ. "ಆಶ್ರಯ" ಯೋಜನೆಯು ಒಂದು ರೀತಿಯಾದ ಜನರಲ್ ಆದ ಯೋಜನೆ. ನಾವು ಮನೆಗಳನ್ನು ಕಟ್ಟಿಕೊಟ್ಟಿರುವ ಪೈಕಿ ನೇಕಾರರಿಗೆ ಅಷ್ಟು ಬಂದಿರಬಹುದು ಎಂದು ಲೆಕ್ಕ ಹಾಕಿ ಹೇಳಿದ್ದಾರೆ. ನೇಕಾರರಿಗೆ ಪ್ರತ್ಯೇಕವಾಗಿ ಮನೆಗಳನ್ನು ಕಟ್ಟಿಕೊಡತಕ್ಕ ಯೋಜನೆ ಇಲ್ಲ. ಸದಸ್ಯರ ಎರಡನೆಯ ಪ್ರಶ್ನೆಗೆ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮುಖಾಂತರ ಮನೆ ಮತ್ತು ಕಮ್ಯುನಿಟಿಗಳನ್ನು ನಿರ್ಮಾಣ ಮಾಡುವ ಬಗ್ಗೆ ಹೇಳಿದ್ದೇನೆ. ಇದು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿಗೆ ಬರುತ್ತದೆ, ನಮ್ಮ ಇಲಾಖೆಗೆ ಬರುವುದಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ (ಜಪಳಿ ರಾಜ್ಯ ಸಚಿವರು):– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಆಚಾರ್‌ರವರು ಕೇಳಿರತಕ್ಕ ಪ್ರಶ್ನೆಗೆ ಹಿರಿಯ ಸಚಿವರಾದ ಕೆ.ಎನ್. ನಾಗೇಗೌಡರು ಉತ್ತರ ಕೊಟ್ಟಿದ್ದಾರೆ. ಅವರು ಈಗಾಗಲೇ ಕೆ.ಹೆಚ್.ಡಿ.ಸಿ.ಯ ಜವಾಬ್ದಾರಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನೇಕಾರರಿಗೆ Work cum living sheds. ಯೋಜನೆ ಜಾರಿಯಲ್ಲಿದೆ. ಈಗಾಗಲೆ ನಮ್ಮ ರಾಜ್ಯದಿಂದ ಸುಮಾರು 903 ನೇಕಾರರಿಗೆ ಆದನ್ನು ಕಟ್ಟಿಸಿಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಯೋಜನೆ ಹೋಗಿದೆ. ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೂ ಕೆಲವು ಮನೆಗಳನ್ನು ನೇಕಾರರಿಗೆ ಕಟ್ಟಿ ಕೊಡುತ್ತೇವೆ.

ಅಧ್ಯಕ್ಷರು:– ಮುನಿಸ್ವಾಮಿಯವರೆ, ತಮ್ಮ ಪ್ರಶ್ನೆ 1689ಕ್ಕೆ ಮಾನ್ಯ ಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ.

ಶ್ರೀ ಎಂ. ಮುನಿಸ್ವಾಮಿ:– ನಾವು ಏಲ್ಲೋ ಆಪರೂಪಕ್ಕೆ ಒಂದೆರಡು ಪ್ರಶ್ನೆಗಳನ್ನು ಕೇಳುತ್ತೇವೆ. ಅದಕ್ಕೂ ಕಾಲಾವಕಾಶಬೇಕೆಂದು ಹೇಳಿದರೆ ಹೇಗೆ ಸ್ವಾಮಿ ?

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೆ, ನನ್ನ ಹತ್ತಿರ ಉತ್ತರ ಇದೆ. ಆದರೆ ಅದನ್ನು ನಾನು ಸೈನ್ಸಿಲ್ ಮಾಡಿಸಬೇಕಾಗಿದೆ.

SRI M. MUNISWAMY:- Sir. I have put a very important question pertaining to my Constituency....

ಅಧ್ಯಕ್ಷರು:– ನಾನು ಇದನ್ನು ಹೆಲ್ಡ್ ಓವರ್ ಮಾಡಿದ್ದೇನೆ.

SRI M. MUNISWAMY:- Thank you.

ರಾಜ್ಯದ ಪದವಿಪೂರ್ವ ವಿದ್ಯಾರ್ಥಿ ನಿಲಯಗಳ ಸಂಖ್ಯೆ

348 (829) ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ):–

ಮಾನ್ಯ ಸಮಾಜಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪದವಿಪೂರ್ವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು ? ಇವುಗಳಲ್ಲಿ ಸ್ವಂತ ಕಟ್ಟಡಗಳೆಷ್ಟು, ಬಾಡಿಗೆ ಕಟ್ಟಡಗಳೆಷ್ಟು ? ಸ್ವಂತ ಕಟ್ಟಡಗಳನ್ನು ಕಟ್ಟಿಸಲು ಸರ್ಕಾರದ ಗಮನದಲ್ಲಿದೆಯೆ;